ಆ)

ಕ್ರ. ಸಂ.	ವರ್ಷ	ತೆರಿಗೆಯ ನಂತರದ ಲಾಭ (₹ ಲಕ್ಷಗಳಲ್ಲಿ)
1	2011–2012	1119.08
2	2012–2013	2268.35
3	2013–2014	3298.19

ಇ) ಎಂಎಸ್ಐಎಲ್ ಸಂಸ್ಥೆಯು ಕ್ಲಾಸ್–1 ಬ್ರಾಂಡ್‌ನ ಕುಡಿಯುವ ನೀರನ್ನು ಮಾರುಕಟ್ಟೆಗೆ ಬಿಡುಗಡೆಗೊಳಿಸಲು ಉದ್ದೇಶಿಸಿದೆ. ಈ ನಿಟ್ಟಿನಲ್ಲಿ ಕ್ಲಾಸ್–1 ಬ್ರಾಂಡಿನಡಿಯಲ್ಲಿ ಕುಡಿಯುವ ನೀರನ್ನು ಸಂಸ್ಥೆಗೆ ಸರಬರಾಜು ಮಾಡಲು ಆಸಕ್ತಿಯುಳ್ಳ ಉತ್ಪಾದಕರಿಂದ ಇ–ಟೆಂಡರ್ ಮೂಲಕ ಅರ್ಜಿಗಳನ್ನು ಕರೆಯಲಾಗುವುದು. ಈ ಬಗ್ಗೆ ಶೀಘ್ರದಲ್ಲಿಯೇ ದಿನಪತ್ರಿಕೆಗಳಲ್ಲಿ ಪ್ರಕಟಣೆಯನ್ನು ನೀಡಲು ಕ್ರಮ ಕೈಗೊಳ್ಳಲಾಗುತ್ತಿದೆ. ಎಂಎಸ್ಐಎಲ್ ಸಂಸ್ಥೆಯು ಉತ್ಪನ್ನ ಮಾರಾಟ ಮತ್ತು ಗ್ರಾಹಕ ಸೇವೆಗಳನ್ನು ಒದಗಿಸುವ ಸಂಸ್ಥೆಯಾಗಿರುವುದರಿಂದ ಸಂಸ್ಥೆಯು ಯಾವುದೇ ರೀತಿಯ ನೀರಿನ ಉತ್ಪಾದನೆಯ ಬಾಟಲ್ ಘಟಕವನ್ನು ಸ್ಥಾಪಿಸುವ ಪ್ರಸ್ತಾವನೆ ಇರುವುದಿಲ್ಲ.

ನೇಕಾರಿಕೆಗೆ ಒದಗಿಸಿಕೊಟ್ಟ ಅಲ್ಪಾವಧಿ ಸಾಲ ಮನ್ನಾ ಕುರಿತು ವಿವರಗಳು

1823 (2124); ಶ್ರೀ ಹ್ಯಾರಿಸ್ ಎಸ್. ಎ. (ಶಾಂತಿನಗರ)

ಅ) 25 ಸಾವಿರ ರೂಗಳವರೆಗಿನ ಅಲ್ಪಾವಧಿ ಸಾಲವನ್ನು ಮನ್ನಾ ಮಾಡುವ ಯೋಜನೆಯ ಸೌಲಭ್ಯವನ್ನು ಒಟ್ಟು ಎಷ್ಟು ನೇಕಾರರ ಫಲಾನುಭವಿಗಳಿಗೆ ಒದಗಿಸಿಕೊಡಲಾಗಿದೆ;

ಆ) ಸದರಿ ಸಾಲ ಮನ್ನಾ ಯೋಜನೆಗಾಗಿ ಸರ್ಕಾರ ಒದಗಿಸಿಕೊಟ್ಟ ಹಣದ ಮೊತ್ತ ಎಷ್ಟು; ಮಂಜೂರಾದ ಮೊತ್ತವನ್ನು ಫಲಾನುಭವಿಗಳಿಗೆ

ಪೂರ್ಣ ಪ್ರಮಾಣದಲ್ಲಿ ನೀಡಲಾಗಿದೆಯೇ; ಸಾಲ ಮನ್ನಾ ಕುರಿತು ಬಂದ ಮನವಿಗಳು ಹಾಗೂ ಪುರಸ್ಕೃತ ಮತ್ತು ತಿರಸ್ಕೃತ ಮನವಿಗಳ ಸಂಖ್ಯೆ ವಿವರ ನೀಡುವುದು.

ಇ) ಸಾಲ ಮನ್ನಾ ಯೋಜನೆ ಅನುಷ್ಠಾನದಲ್ಲಿ ಕಂಡು ಬಂದ ಲೋಪದೋಷಗಳು ಹಾಗೂ ಅವ್ಯವಹಾರಗಳ ಕುರಿತು ದಾಖಲಾದ ಪ್ರಕರಣಗಳು ಮತ್ತು ಆ ಕುರಿತು ಇಲಾಖೆಯು ಕೈಗೊಂಡ ಕಟ್ಟುನಿಟ್ಟಿನ ಕ್ರಮಗಳೇನು? (ವಿವರ ನೀಡುವುದು)

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ (ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು)

ಅ) ₹ 25,000/– ವರೆಗಿನ ಸಾಲ ಮನ್ನಾ ಯೋಜನೆಯಡಿಯಲ್ಲಿ 19683 ನೇಕಾರ ಫಲಾನುಭವಿಗಳಿಗೆ ಸೌಲಭ್ಯವನ್ನು ಒದಗಿಸಿಕೊಡಲಾಗಿದೆ.

ಆ) ಸಾಲ ಮನ್ನಾ ಯೋಜನೆಗೆ ಸರ್ಕಾರವು ಒಟ್ಟು ₹ 3173.72 ಲಕ್ಷ ಮೊತ್ತವನ್ನು ಒದಗಿಸಿರುತ್ತದೆ. ಮಂಜೂರಾದ ಮೊತ್ತವನ್ನು ಫಲಾನುಭವಿಗಳಿಗೆ ಭಾಗಶಃ ಬಿಡುಗಡೆಗೆ ಬಾಕಿ ಇರುತ್ತದೆ. ಸಾಲ ಮನ್ನಾ ಕುರಿತು ಬಂದ ಮನವಿಗಳ ಸಂಖ್ಯೆ: 25065. ಈ ಪೈಕಿ ಪುರಸ್ಕೃತ ಮನವಿಗಳ ಸಂಖ್ಯೆ 19683 ಹಾಗೂ ತಿರಸ್ಕೃತ ಮನವಿಗಳ ಸಂಖ್ಯೆ: 5382.

ಇ) ಸಹಕಾರ ಸಂಸ್ಥೆಗಳು ಸಲ್ಲಿಸಿದ ಕ್ಲೇಮು ಬಿಲ್‌ಗಳನ್ನು ಸರ್ಕಾರದ ಆದೇಶದ ಪ್ರಕಾರ ಸರಿಯಾಗಿ ಪರಿಶೀಲಿಸದೆ ನೇಕಾರರಲ್ಲದವರಿಗೂ ನೈಜ ನೇಕಾರರೆಂದು, 9 ಸಹಕಾರ ಸಂಘಗಳ ಜಿಲ್ಲಾ ಉಪ ನಿಬಂಧಕರು ಹಾಗೂ 9 ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಜಿಲ್ಲಾ ಉಪ ನಿರ್ದೇಶಕರುಗಳು ಅನರ್ಹ ಕ್ಲೇಮು ಬಿಲ್‌ಗಳನ್ನು ಪ್ರಮಾಣೀಕರಿಸಿ ಮತ್ತು ದೃಢೀಕರಿಸಿ ಕರ್ತವ್ಯ ಲೋಪವೆಸಗಿದ್ದಾರೆಂದು ಆರೋಪ ಹೊರಿಸಿ, ಅವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು

ಸರ್ಕಾರವು ವಿಚಾರಣೆಗೆ ನಿವೃತ್ತ ಜಿಲ್ಲಾ ನ್ಯಾಯಾಧೀಶರನ್ನು ನೇಮಿಸಿ ಆದೇಶಿಸಿರುತ್ತದೆ. ವಿವರಗಳು ಈ ಕೆಳಕಂಡಂತಿರುತ್ತವೆ.

ಕ್ರ ಸಂ.	ಸ ಸಂ. ಉಪ ನಿಬಂಧಕರ ಹೆಸರು	ಕೈಗೊಂಡ ಕ್ರಮ	ಸ.ಸಂ.ಲೆಕ್ಕಪರಿ ಶೋಧನ ಉಪ ನಿರ್ದೇಶಕರ ಹೆಸರು	ಕೈಗೊಂಡ ಕ್ರಮ
1	ಶ್ರೀ ಕೆ. ಬಿ. ಅನಂತ್	ಸದರಿಯವರು ಮೃತರಾಗಿರುವುದರಿಂದ ಇವರ ವಿರುದ್ಧ ಶಿಸ್ತುಕ್ರಮವನ್ನು ಕೈಬಿಡಲಾಗಿದೆ	ಶ್ರೀ ಎಸ್. ಶಿವ ಕುಮಾರ್	ಇವರಿಗೆ ಸಿ.ಸಿ.ಎ. ರೀತ್ಯಾ 2 ವಾರ್ಷಿಕ ವೇತನ ಬಡ್ತಿಗಳನ್ನು ಕೆಳಹಂತಕ್ಕೆ ಬಳಸಿ ದಂಡನೆಯನ್ನು ವಿಧಿಸಿದೆ.
2	ಶ್ರೀ ಗುರಪ್ಪ ಮಲ್ಲಪ್ಪ ಪಾಟೀಲ್	ಸದರಿಯವರ ವಿರುದ್ದದ ಆರೋಪಗಳು ಸಾಬೀತಾಗಿರುವುದಿಲ್ಲವೆಂದು ವಿಚಾರಣಾಧಿಕಾರಿಗಳು ದಿನಾಂಕ: 14.12.2012 ರಂದು ವರದಿ ಸಲ್ಲಿಸಿರುವುದರಿಂದ ಅವರನ್ನು ದೋಷಮುಕ್ತರನ್ನಾಗಿಸಿ, ದಿನಾಂಕ: 01.07.2013 ರಂದು ಆದೇಶಿಸಲಾಗಿದೆ.	ಶ್ರೀ ಎಂ. ರವಿ	ಇವರಿಗೆ ಸಿ.ಸಿ.ಎ. ರೀತ್ಯಾ 2 ವಾರ್ಷಿಕ ವೇತನ ಬಡ್ತಿಗಳನ್ನು ಸಂಚಿತ ಪರಿಣಾಮದೊಂದಿಗೆ ತಡೆ ಹಿಡಿಯುವ ದಂಡನೆಯನ್ನು ವಿಧಿಸಿದೆ.
3	ಶ್ರೀ ಅರಳಿ ಸೂರ್ಯ ಕಾಂತ್	ಶ್ರೀ ಎನ್.ಎಸ್. ಪಾಟೀಲ್, ವಿಚಾರಣಾಧಿಕಾರಿಗಳು, ಇವರ ಅನಾರೋಗ್ಯದ ನಿಮಿತ್ತ ಶ್ರೀ ಡಿ.ವಿ. ಶೇಟ್, ವಿಚಾರಣಾಧಿಕಾರಿಗಳನ್ನಾಗಿ ನೇಮಕ ಮಾಡಲಾಗಿದೆ. ವಿಚಾರಣೆ ಪ್ರಗತಿಯಲ್ಲಿದೆ.	ಶ್ರೀ ಬಿ.ಎಸ್. ಪಾಟೀಲ್	ಇವರ ವಿರುದ್ಧದ ಆರೋಪಗಳನ್ನು ಕೈಬಿಟ್ಟು ದೋಷಮುಕ್ತರನ್ನಾಗಿ ಆದೇಶಿಸಿದೆ.

4	ಶ್ರೀ ಶಿವ ಕುಲಕರ್ಣಿ	ಸದರಿಯವರಿಗೆ ಕರ್ನಾಟಕ ನಾಗರೀಕ ಸೇವಾ (ಸಿಸಿಎ) ನಿಯಮಗಳು 1957 ನಿಯಮ 8(2) ರನ್ವಯ ವಾಗ್ದಂಡನೆ ವಿಧಿಸಲಾಗಿದೆ.	ಶ್ರೀ ಎಸ್.ಎಸ್. ಮೇಟಿ	ಇವರ ವಿರುದ್ಧದ ಆರೋಪಗಳನ್ನು ಕೈಬಿಟ್ಟು ದೋಷಮುಕ್ತರನ್ನಾಗಿ ಆದೇಶಿಸಿದೆ.
5	ಶ್ರೀ ವೈ. ಹೆಚ್ ಗೋಪಾಲ ಕೃಷ್ಣ	ಆರೋಪಗಳು ಸಾಬೀತಾಗಿಲ್ಲವೆಂದು ಅವರನ್ನು ದೋಷಮುಕ್ತರನ್ನಾಗಿಸಿ, ದಿನಾಂಕ: 01.04.2014 ರಂದು ಆದೇಶಿಸಲಾಗಿದೆ.	ಶ್ರೀ ಸಿ.ಬಿ. ಚಿಕ್ಕಾಡಿ	ಸರ್ಕಾರದ ಆದೇಶ ಸಂಖ್ಯೆ ಸ ಇ 96 ಎಲೆಸೇ 2014 ದಿ· 24.01.2015 ರಲ್ಲಿ ವಿಚಾರಣಾಧಿಕಾರಿ & ಮಂಡನಾಧಿಕಾರಿಯನ್ನು ನೇಮಿಸಲಾಗಿರುತ್ತದೆ ಶಿಸ್ತು ಕ್ರಮ ಪ್ರಗತಿಯಲ್ಲಿರುತ್ತದೆ
6	ಶ್ರೀ ಕೆ.ಸಿ. ಯತೀಶ್ ಕುಮಾರ್	ಸದರಿಯವರಿಗೆ ಕರ್ನಾಟಕ ನಾಗರೀಕ ಸೇವಾ (ಸಿಸಿಎ) ನಿಯಮಗಳು 1957 ರ ನಿಯಮ 8(3) ರನ್ವಯ ಮುಂದಿನ ಒಂದು ವಾರ್ಷಿಕ ವೇತನ ಬಡ್ತಿಯನ್ನು ಸಂಚಿತ ಪರಿಣಾಮ ರಹಿತವಾಗಿ ತಡೆಹಿಡಿಯುವ ದಂಡನೆ ವಿಧಿಸಿದೆ.	ಶ್ರೀ ಬಿ.ಎನ್. ರೆಡ್ಡಪ್ಪ	ಇವರ ವಿರುದ್ಧದ ವಿಚಾರಣೆಯು ಪೂರ್ಣಗೊಂಡಿದ್ದು, ಸರ್ಕಾರಕ್ಕೆ ವಿಚಾರಣಾ ವರದಿ ಸ್ವೀಕೃತವಾಗಿರುತ್ತದೆ
7	ಶ್ರೀ ಮುನಿಯಪ್ಪ ಕೋಲೂರು	ಆರೋಪಗಳು ಸಾಬೀತಾಗಿಲ್ಲವೆಂದು ಅವರನ್ನು ದೋಷಮುಕ್ತ ರನ್ನಾಗಿಸಿ, ದಿನಾಂಕ: 18.12.2013 ರಂದು ಆದೇಶಿಸಲಾಗಿದೆ.	ಶ್ರೀ ಬಸವರಾಜು	ಸರ್ಕಾರದ ಆದೇಶ ಸಂಖ್ಯೆ:ಸಇ/124/ಎಲೆಸೇ/ 2011 ದಿನಾಂಕ: 23.01 15 ರಲ್ಲಿ ಕರ್ನಾಟಕ ಸರ್ಕಾರಿ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ ನಿಯಮಾವಳಿಗಳು 1957 ರ ನಿಯಮ

				8(iv-A) ರನ್ವಯ ಕಾಲಿಕ ವೇತನ ಶ್ರೇಣಿಯಲ್ಲಿ ಒಂದು ಹಂತವನ್ನು ಎರಡು ವರ್ಷಗಳ ಕಾಲಾವಧಿಗೆ ಕೆಳಗಿನ ಹಂತಕ್ಕೆ ಇಳಿಸುವ ದಂಡನೆಯನ್ನು ವಿಧಿಸಲಾಗಿದೆ.
8	ಶ್ರೀ ಬಿ. ಎಸ್. ಹರೀಶ್	ಆರೋಪಗಳು ಸಾಬೀತಾಗಿಲ್ಲವೆಂದು ಅವರನ್ನು ದೋಷಮುಕ್ತರನ್ನಾಗಿಸಿ, ದಿನಾಂಕ: 07.03.2014 ರಂದು ಆದೇಶಿಸಲಾಗಿದೆ.	ಕೆ.ಎಸ್. ಅಶೋಕ್ ಕುಮಾರ್	ವಿಚಾರಣೆ ಸಂಬಂಧ ಹೆಚ್ಚುವರಿ ದಾಖಾತಿಗಳನ್ನು ಸರ್ಕಾರಿ ಅಧಿಕಾರಿಯವರು ಕೋರಿದ್ದು ಸರ್ಕಾರದ ಪತ್ರ ದಿನಾಂಕ: 28.10.2014 ರಲ್ಲಿ ಹೆಚ್ಚಿನ ದಾಖಲಾತಿಗಳನ್ನು ನೀಡಲು ಅವಕಾಶ ವಿರುವುದಿಲ್ಲವೆಂದು ತಿಳಿಲಿಸಲಾಗಿದೆ ವಿಚಾರಣೆ ಪ್ರಗತಿಯಲ್ಲಿರುತ್ತದೆ.
9	ಶ್ರೀ ಗದ್ದನಕೇರಿ ಹೆಚ್. ವೈ.	ಆರೋಪಗಳು ಸಾಬೀತಾಗಿಲ್ಲವೆಂದು ಅವರನ್ನು ದೋಷಮುಕ್ತರನ್ನಾಗಿಸಿ, ದಿನಾಂಕ: 07.02.2014 ರಂದು ಆದೇಶಿಸಲಾಗಿದೆ.	ಶ್ರೀ ಮಲ್ಲೇಶಪ್ಪ	ಮಂಡನಾಧಿಕಾರಿಗಳು ಸರ್ಕಾರಿ ಸೇವೆಯಿಂದ ವಯೋನಿವೃತ್ತಿ ಹೊಂದಿರುವುದರಿಂದ ಸರ್ಕಾರದ ತಿದ್ದುಪಡಿ ಆದೇಶ ಸಂಖ್ಯೆ: ಸಇ/219/ಎಲೇಸ/2011 ದಿನಾಂಕ. 03 12.2014 ರಲ್ಲಿ ಬೇರೆ ಮಂಡನಾಧಿಕಾರಿಯನ್ನು ನೇಮಿಸಿದ್ದು ವಿಚಾರಣೆ ಪ್ರಗತಿಯಲ್ಲಿರುತ್ತದೆ.